GATWU
Garments and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್
Reg No. ALCB4/DRT/CUV18/2005-06 (Affiliated to New Trade Union Initiative - NTUI)

ದಿನಾಂಕ: 18.01.2021

ಗೆ,
ಉಪ ಕಾರ್ಮಿಕ ಆಯುಕ್ತರು
ಪ್ರಾದೇಶಿಕ – 2
ಕಾರ್ಮಿಕ ಭವನ,
ಬನ್ನೇರುಘಟ್ಟ ರಸ್ತೆ,

ಮಾನ್ಯರೇ,

ವಿಷಯ: ಆಕ್ವೆರೆಲ್ ಇಂಡಿಯಾ ಪ್ರೈ.ಲಿ **ನಂ. 1/1, 51/1, ಕಲ್ಲುಬಾಳು ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560105.** ಈ ಕಂಪನಿಯನ್ನು ಕಾನೂನು ಬಾಹಿರವಾಗಿ ಮುಚ್ಚುವ ದುರುದ್ದೇಶದಿಂದ ಆಡಳಿತವರ್ಗದವರು ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ದೂರು.

-----

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಕಳೆದ 16 ವರ್ಷಗಳಿಂದ ಕರ್ನಾಟಕದಲ್ಲಿರುವ ಗಾರ್ಮೆಂಟ್ ಮತ್ತು ಟೆಕ್ಸ್‌ಟೈಲ್ ಹಾಗೂ ಇದಕ್ಕೆ ಪೂರಕ ಸಾಮಗ್ರಿಗಳನ್ನು ಒದಗಿಸುವ ಕಾರ್ಮಿಕರ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿದೆ. ಪ್ರಸ್ತುತ ಆಕ್ವೆರೆಲ್ ಇಂಡಿಯಾ ಪ್ರೈ.ಲಿ ಕಂಪನಿಯ ಹೆಚ್ಚಿನ ಕಾರ್ಮಿಕರು ಯೂನಿಯನ್‌ನ ಸದಸ್ಯತ್ವ ಪಡೆದಿದ್ದಾರೆ ಮತ್ತು ದಿನಾಂಕ 03.01.2021 ರಂದು ನಡೆದ ಆಕ್ವೆರೆಲ್ ಇಂಡಿಯಾ ಪ್ರೈ.ಲಿ ಕಂಪನಿಯ ಕಾರ್ಮಿಕರ ಸರ್ವ ಸದಸ್ಯರ ಸಭೆಯಲ್ಲಿ ಸುಮಾರು 156 ಜನ ಕಾರ್ಮಿಕರು ಭಾಗವಹಿಸಿ ಸರ್ವಾನುಮತದಿಂದ ನಿರ್ಣಯವನ್ನು ತೆಗೆದುಕೊಂಡು ಕಂಪನಿ ಮತ್ತು ಕಾರ್ಮಿಕರ ಮಧ್ಯೆ ಉಂಟಾಗುವ ಯಾವುದೇ ಕಾರ್ಮಿಕ ಸಂಬಂಧೀ ವಿವಾದಗಳಿಗೆ ಪ್ರತಿನಿಧಿಸಲು, ವ್ಯವಹರಿಸಲು ಯೂನಿಯನ್‌ಗೆ ಅಧಿಕಾರ ಪತ್ರವನ್ನು ನೀಡಿದ್ದಾರೆ. ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಮತ್ತು ಅಧಿಕಾರ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ **ಆಕ್ವೆರೆಲ್ ಇಂಡಿಯಾ ಪ್ರೈ ಲಿ., ನಂ. 1/1, 51/1, ಕಲ್ಲುಬಾಳು ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560105** ರಲ್ಲಿ ಕಳೆದ 15 ವರ್ಷದಿಂದ ಈ ಮೇಲಿನ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿದೆ, ಈ ಕಂಪನಿಯಲ್ಲಿ ಸುಮಾರು 1,000 ಕಾರ್ಮಿಕರು ದುಡಿಯುತ್ತಿದ್ದರು. ಇದರ ನೋಂದಾಯಿತ ಕಛೇರಿಯು ನಂ. 94 ಮತ್ತು 95, ಹೊಸ ನಂ. 113, ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು–560019 ಯಲ್ಲಿ ಇದೆ.

ದಿನಾಂಕ 30.12.2020 ರಂದು ಆಡಳಿತವರ್ಗದವರು ಇದ್ದಕ್ಕಿದ್ದಂತೆ ನೋಟೀಸ್ ಒಂದನ್ನು ಹಾಕಿ ಅದರಲ್ಲಿ ದಿನಾಂಕ 15.01.2021 ರಿಂದ ಈ ಕಂಪನಿಯನ್ನು ನಂ. 93, 25/1, 24/2, ಕೆಂಪನಾಯಕನಹಳ್ಳಿ, ಬನ್ನೇರುಘಟ್ಟ ದಾಖಲೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560083 ಇಲ್ಲಿಗೆ

Office : # 17/1, First Floor, Near BMTC Bus Stop, New Guddadahalli, Mysore Road, Bengaluru-560 026
Ph : 080-26745242 Email : gatwu@rediffmail.com Website : www.gatwu.org.in
NTUI : B-137, Ist Floor, Dayanand Colony, Lajpatnagar-IV, New Delhi - 110 0024, Ph : 011-26486931

[redacted]

ಸ್ಥಳಾಂತರಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಈ ಸಂಬಂಧ ಕಾರ್ಮಿಕರು ಈಗಾಗಲೇ ದಿನಾಂಕ 31.12.2020 ರಂದು ತಮಗೆ ಲಿಖಿತ ದೂರನ್ನು ನೀಡಿರುತ್ತಾರೆ. ಈ ಅರ್ಜಿಗೆ ಸಂಬಂಧ ಪಟ್ಟಂತೆ ದಿನಾಂಕ 11.01.2021 ರಂದು ಸಂಧಾನ ಸಭೆಯು ನಿಗದಿಯಾಗಿತ್ತು. ಈ ಸಭೆಯಲ್ಲಿ ಕಾರ್ಮಿಕರ ಪರವಾಗಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಭಾಗವಹಿಸಿತ್ತು. ಸಂಧಾನ ಸಭೆಯಲ್ಲಿ ಅಂದು, ಈ ಪ್ರಕರಣವು ಇತ್ಯರ್ಥವಾಗುವವರೆಗೂ ಯಥಾಸ್ಥಿತಿಯನ್ನು ಕಾಪಾಡಬೇಕೆಂದು ತಾವು ಆಡಳಿತವರ್ಗದವರಿಗೆ ಲಿಖಿತ ಸೂಚನೆಯನ್ನು ನೀಡಿದ್ದೀರಿ ಮತ್ತು ಕಾರ್ಮಿಕರ ಪ್ರತಿನಿಧಿಯಾದ GATWU ಮತ್ತು ಆಡಳಿತವರ್ಗ ಕುಳಿತು ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಸೂಚಿಸಿದ್ದಿರಿ.

ದಿನಾಂಕ 31.12.2020 ರಂದು ಕಾರ್ಮಿಕರು ಕೊಟ್ಟಿರುವ ಕೆಲಸ ನಿರಾಕರಣೆ ಅರ್ಜಿಯ ಮುಂದುವರೆದ ಭಾಗವಾಗಿ ಹಲವಾರು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಕೋವಿಡ್-19 ಲಾಕ್‌ಡೌನ್‌ಗೆ ಮುನ್ನ ಈ ಕಂಪನಿಯಲ್ಲಿ ಸುಮಾರು ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಲಾಕ್‌ಡೌನ್ ಮುಗಿದ ನಂತರ ಕಂಪನಿಯನ್ನು ಮುಚ್ಚುವ ಉದ್ದೇಶದಿಂದ ಕಾರ್ಮಿಕರಿಗೆ ಒದಗಿಸಿದ್ದ ಸಾರಿಗೆ ವ್ಯವಸ್ಥೆಯನ್ನು ಆಡಳಿತವರ್ಗದವರು ನಿಲ್ಲಿಸಿ ಕಾರ್ಮಿಕರು ಕೆಲಸಕ್ಕೆ ಬರದಂತೆ ನೋಡಿಕೊಂಡಿದ್ದಾರೆ ಜೊತೆಗೆ ಪರೋಕ್ಷವಾಗಿ ಕಾರ್ಮಿಕರಿಗೆ ಭಯ ಮತ್ತು ಒತ್ತಡವನ್ನು ಹಾಕಿ ಅವರಾಗಿಯೇ ರಾಜೀನಾಮೆಯನ್ನು ನೀಡುವಂತಹ ಸನ್ನಿವೇಶವನ್ನು ಸೃಷ್ಟಿಸಿ ಸುಮಾರು 600 ಜನ ಕಾರ್ಮಿಕರು ಕೆಲಸ ಬಿಡುವಂತೆ ಮಾಡಿದ್ದಾರೆ. ಇದ್ದಕ್ಕಿದ್ದಂತೆ ಸಾರಿಗೆ ವ್ಯವಸ್ಥೆಯನ್ನು ಕಾರ್ಮಿಕರು ಗಮನಕ್ಕೂ ತರದೆ ನಿಲ್ಲಿಸಿರುವುದು ಕೈಗಾರಿಕಾ ಕಾಯಿದೆಯ ಸೆಕ್ಷನ್ 9ಎ ಉಲ್ಲಂಘನೆಯಾಗಿರುತ್ತದೆ. ಪ್ರಸ್ತುತ ಸುಮಾರು 400 ಕಾರ್ಮಿಕರು ಆಡಳಿತವರ್ಗದವರ ಕಿರುಕುಳ, ಬೆದರಿಕೆಯನ್ನು ಲೆಕ್ಕಿಸದೆ ಅಲ್ಲೆ ಉಳಿದು ಕೆಲಸ ಮಾಡುತ್ತಿದ್ದಾರೆ. ಈಗ ಇದ್ದಕ್ಕಿಂದ್ದಂತೆ ದಿನಾಂಕ 30.12.2020 ರಂದು ಕಂಪನಿಯನ್ನು ಸ್ಥಳಾಂತರಿಸಲಾಗುತ್ತದೆ ಎಂದು ನೋಟೀಸ್ ಬೋರ್ಡ್ ಹಾಕಿದ್ದಾರೆ ಮತ್ತು ಯಂತ್ರೋಪಕರಣಗಳನ್ನು ಬೇರೆಡೆಗೆ ಸಾಗಿಸುತ್ತಿದ್ದಾರೆ. ಆಡಳಿತವರ್ಗದವರ ಈ ಕ್ರಮವು ಕಂಪನಿಯನ್ನು ಮುಚ್ಚುವ ದುರುದ್ದೇಶದಿಂದ ಕೂಡಿದೆ ಎಂದು ಇದರಿಂದ ಸಾಬೀತಾಗುತ್ತದೆ.

ಸಂಧಾನ ಸಭೆ ನಡೆದ ನಂತರ ಆಡಳಿತವರ್ಗದವರು ಕಾರ್ಮಿಕರು ರಾಜೀನಾಮೆ ಕೊಡುವಂತೆ ಬೆದರಿಕೆ ಮತ್ತು ಒತ್ತಡವನ್ನು ಸೃಷ್ಟಿಸಿದ್ದಾರೆ ಜೊತೆಗೆ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಬೇಕೆಂಬ ತಮ್ಮ ಲಿಖಿತ ಸೂಚನೆಯನ್ನು ಉಲ್ಲಂಘಿಸಿದ್ದಾರೆ. ಈ ಸಂಬಂಧ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ತಮ್ಮ ವಿಶ್ವಾಸಿ,

Prathibha

ಪ್ರತಿಭಾ ಆರ್

(ಅಧ್ಯಕ್ಷರು)

[redacted]